# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : | 13 (77) |
| ಸದಸ್ಯರ ಹೆಸರು | : | ಶ್ರೀ ಡಿ.ಎಸ್. ಅರುಣ್ |
| ಉತ್ತರಿಸಬೇಕಾದ ದಿನಾಂಕ | : | 13.02.2024 |
| ಉತ್ತರಿಸಬೇಕಾದ ಸಚಿವರು | : | ನಗರಾಭಿವೃದ್ಧಿ ಸಚಿವರು |

<table>
<tr><th colspan="2">ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ರಾಜ್ಯದಲ್ಲಿ 2022-23 - 2023-24 ನೇ ಸಾಲಿನಲ್ಲಿ ಟ್ರೇಡ್ ಪರವಾನಿಗೆ ವಿತರಣೆಯಿಂದ ಎಷ್ಟು ಹಣ ಸಂಗ್ರಹ ಮಾಡಲಾಗಿದೆ;</td><td>ರಾಜ್ಯದ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಉದ್ದಿಮೆ ಪರವಾನಿಗೆಯಿಂದ ಸಂಗ್ರಹಿಸಲಾದ ಆದಾಯದ ವಿವರ ಈ ಕೆಳಕಂಡಂತಿದೆ:<br><table><tr><th>2022-2023</th><th>2023-2024</th></tr><tr><td>ರೂ.5078.00 ಲಕ್ಷಗಳು</td><td>ರೂ.4796.00</td></tr></table></td></tr>
<tr><td>ಆ)</td><td>ಸರ್ಕಾರಕ್ಕೆ ಇದರಿಂದಾಗುವ ಅನುಕೂಲಗಳ ಕುರಿತು ಮಾಹಿತಿ ಒದಗಿಸುವುದು;</td><td>ಕರ್ನಾಟಕ ಪೌರಸಭೆಗಳ ಅಧಿನಿಯಮ 1964ರ ಕಲಂ 256 ಹಾಗೂ ಕರ್ನಾಟಕ ಪೌರನಿಗಮಗಳ ಅಧಿನಿಯಮ 1976ರ ಕಲಂ 353ರಲ್ಲಿನ ಅವಕಾಶದಂತೆ, ನಗರ ಸ್ಥಳೀಯ ಸಂಸ್ಥೆಗಳು ತಮ್ಮ ವ್ಯಾಪ್ತಿಯ ವ್ಯಾಪಾರಸ್ಥರಿಗೆ / ಉದ್ದಿಮೆದಾರರಿಗೆ ವ್ಯಾಪಾರ ಪರವಾನಿಗೆಯನ್ನು ನೀಡಲು ಅವಕಾಶವಿರುತ್ತದೆ.<br><br>ಕರ್ನಾಟಕ ಪೌರಸಭೆಗಳ ಅಧಿನಿಯಮ 1964 ಮತ್ತು ಕರ್ನಾಟಕ ಪೌರನಿಗಮಗಳ ಅಧಿನಿಯಮ 1976ರಲ್ಲಿ ಉಪವಿಧಿಗಳನ್ನು ರಚಿಸಿಕೊಳ್ಳಲು ನಗರ ಸ್ಥಳೀಯ ಸಂಸ್ಥೆಗಳಿಗೆ ಇರುವ ಅವಕಾಶದನ್ವಯ ನಿಗಧಿತ ಶುಲ್ಕವನ್ನು ಪಾವತಿಸಿಕೊಂಡು ಉದ್ದಿಮೆ ಪರವಾನಿಗೆಗಳನ್ನು ನಗರ ಸ್ಥಳೀಯ ಸಂಸ್ಥೆಗಳಿಂದ ನೀಡಲಾಗುತ್ತಿದೆ.<br><br>ಸದರಿ ಉದ್ದಿಮೆ ಪರವಾನಿಗೆ ಶುಲ್ಕದಿಂದ ಸಂಗ್ರಹವಾದ ಮೊತ್ತವನ್ನು ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಮೂಲಭೂತ ಸೌಲಭ್ಯಗಳನ್ನು ಒದಗಿಸಲು ಬಳಸಿಕೊಳ್ಳಲಾಗುತ್ತಿದೆ. ಮೇಲಿನ ಕಾಯ್ದೆಗಳನ್ವಯ ನಗರ ಸ್ಥಳೀಯ ಸಂಸ್ಥೆಗಳು ತಮ್ಮ ವ್ಯಾಪ್ತಿಯಲ್ಲಿ ನಿಯಮಗಳನ್ನು ಉಲ್ಲಂಘಿಸಿ, ನಡೆಸಲಾಗುತ್ತಿರುವ ವ್ಯಾಪಾರ ಮತ್ತು ಉದ್ದಿಮೆಗಳಿಗೆ ದಂಡ ವಿಧಿಸಲು ಅವಕಾಶವಿರುತ್ತದೆ.</td></tr>
<tr><td>ಇ)</td><td>ಎಷ್ಟು ಜನ ಹೋಟೆಲ್ ಉದ್ಯಮದಾರರು ಟ್ರೇಡ್ ಪರವಾನಿಗೆ ಪಡೆದು ಕೊಂಡಿದ್ದಾರೆ;<br>(ಜಿಲ್ಲಾವಾರು ಮಾಹಿತಿ ಒದಗಿಸುವುದು)</td><td>ರಾಜ್ಯದ ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಒಟ್ಟು 13692 ಹೋಟೆಲ್ ಉದ್ದಿಮೆದಾರರು ಟ್ರೇಡ್ ಪರವಾನಿಗೆಯನ್ನು ಪಡೆದುಕೊಂಡಿರುತ್ತಾರೆ. ಜಿಲ್ಲಾವಾರು ಮಾಹಿತಿಯನ್ನು ಅನುಬಂಧ ದಲ್ಲಿ ನೀಡಲಾಗಿದೆ.</td></tr>
<tr><td>ಈ)</td><td>ಟ್ರೇಡ್ ಪರವಾನಿಗೆ ಸಂಗ್ರಹ ಮಾಡುವ ಸಮಯದಲ್ಲಿ ಭ್ರಷ್ಟಾಚಾರ ನಡೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಈ ಕುರಿತು ಕೈಗೊಂಡ ಕ್ರಮಗಳೇನು?</td><td>ರಾಜ್ಯದ ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಟ್ರೇಡ್ ಪರವಾನಿಗೆ ಶುಲ್ಕವನ್ನು ಸಂಗ್ರಹ ಮಾಡುವ ಸಮಯದಲ್ಲಿ ಭ್ರಷ್ಟಾಚಾರ ನಡೆದಿರುವುದು ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ.<br><br>ಸರ್ಕಾರದಿಂದ ಉದ್ದಿಮೆ ಪರವಾನಿಗೆ ಪಡೆಯುವ ಕ್ರಮವನ್ನು ಸರಳೀಕರಿಸಿ, ಪಾರದರ್ಶಕತೆಯನ್ನು ತರಲು ಸರ್ಕಾರದ ಆದೇಶ ಸಂಖ್ಯೆ: ನಅಇ 465 ಎಂಎನ್‌ಯು 2018, ದಿನಾಂಕ: 06-08-2019 ರನ್ವಯ ಪೌರಾಡಳಿತ ನಿರ್ದೇಶನಾಲಯದ ಕೆ.ಎಮ್.ಡಿ.ಎಸ್. ಸಂಸ್ಥೆಯಿಂದ ಅಭಿವೃದ್ಧಿಪಡಿಸಿರುವ "ವ್ಯಾಪಾರ" ಆನ್‌ಲೈನ್ ತಂತ್ರಾಂಶದ ಮೂಲಕ ನಿಗಧಿತ ಶುಲ್ಕವನ್ನು ಪಾವತಿಸಿಕೊಂಡು ಗರಿಷ್ಠ 5 ವರ್ಷಗಳ ಅವಧಿಯವರೆಗೆ ಉದ್ದಿಮೆ/ವ್ಯಾಪಾರ ಪರವಾನಿಗೆಗಳನ್ನು ಆನ್‌ಲೈನ್ ಮೂಲಕ ಪಡೆಯಲು/ನವೀಕರಿಸಲು ಅವಕಾಶ ಕಲ್ಪಿಸಲಾಗಿದೆ.</td></tr>
</table>

**ಸಂಖ್ಯೆ: ನಅಇ 36 ಎಂಎನ್‌ಇ 2024(ಇ)**

12/02/2024

(ಬಿ.ಎಸ್. ಸುರೇಶ)
ನಗರಾಭಿವೃದ್ಧಿ ಹಾಗೂ ನಗರ ಯೋಜನೆ ಸಚಿವರು

## ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ:13(77)ರ ಉತ್ತರಕ್ಕೆ ಅನುಬಂಧ

| ಕ್ರ.ಸಂ | ಜಿಲ್ಲೆ / ಮಹಾನಗರ ಪಾಲಿಕೆ | ಟ್ರೇಡ್ ಪರವಾನಗಿ ವಿತರಣೆಯಿಂದ ಸಂಗ್ರಹವಾದ ಮೊತ್ತ (ರೂ.ಲಕ್ಷಗಳಲ್ಲಿ) | | ಟ್ರೇಡ್ ಪರವಾನಗಿ ಪಡೆದುಕೊಂಡಿರುವ ಹೋಟೆಲ್ ಉದ್ದಿಮೆದಾರರ ಸಂಖ್ಯೆ |
|---|---|---|---|---|
| | | 2022-23 | 2023-24 | |
| 1 | 2 | 4 | 5 | 7 |
| 1 | ಬೆಂಗಳೂರು ಗ್ರಾಮಾಂತರ | 91.78 | 97.00 | 207 |
| 2 | ಬೆಂಗಳೂರು ನಗರ | 74.72 | 117.43 | 316 |
| 3 | ಚಿಕ್ಕಬಳ್ಳಾಪುರ | 37.12 | 64.75 | 193 |
| 4 | ಚಿತ್ರದುರ್ಗ | 62.16 | 65.77 | 207 |
| 5 | ದಾವಣಗೆರೆ | 20.57 | 40.79 | 133 |
| 6 | ಕೋಲಾರ | 38.05 | 50.15 | 163 |
| 7 | ರಾಮನಗರ | 104.26 | 110.57 | 184 |
| 8 | ಶಿವಮೊಗ್ಗ | 51.87 | 49.54 | 538 |
| 9 | ತುಮಕೂರು | 70.22 | 64.77 | 227 |
| 10 | ಚಾಮರಾಜನಗರ | 35.97 | 38.41 | 126 |
| 11 | ಚಿಕ್ಕಮಗಳೂರು | 102.49 | 98.55 | 227 |
| 12 | ದಕ್ಷಿಣ ಕನ್ನಡ | 172.76 | 182.13 | 645 |
| 13 | ಹಾಸನ | 79.01 | 86.82 | 576 |
| 14 | ಕೊಡಗು | 72.46 | 91.88 | 179 |
| 15 | ಮಂಡ್ಯ | 81.59 | 94.26 | 242 |
| 16 | ಮೈಸೂರು | 799.31 | 662.88 | 670 |
| 17 | ಉಡುಪಿ | 161.43 | 168.84 | 528 |
| 18 | ಬಾಗಲಕೋಟೆ | 41.59 | 69.58 | 481 |
| 19 | ಬೆಳಗಾವಿ | 61.08 | 77.35 | 519 |
| 20 | ಧಾರವಾಡ | 13.14 | 16.56 | **145** |
| 21 | ಗದಗ | 56.64 | 74.06 | 665 |
| 22 | ಹಾವೇರಿ | 42.70 | 78.04 | 363 |
| 23 | ಉತ್ತರ ಕನ್ನಡ | 77.05 | 107.34 | 294 |
| 24 | ವಿಜಯಪುರ | 25.44 | 33.99 | 115 |
| 25 | ಬಳ್ಳಾರಿ | 28.44 | 34.77 | 115 |
| 26 | ಬೀದರ್ | 49.25 | 100.89 | 218 |
| 27 | ಕಲಬುರಗಿ | 36.91 | 54.13 | 170 |
| 28 | ಕೊಪ್ಪಳ | 46.35 | 64.06 | 203 |
| 29 | ರಾಯಚೂರು | 67.70 | 53.30 | 281 |
| 30 | ವಿಜಯನಗರ | 44.54 | 49.35 | 268 |
| 31 | ಯಾದಗಿರಿ | 14.50 | 30.05 | 122 |
| 32 | ಕಲಬುರಗಿ | 132.39 | 148.72 | 542 |
| 33 | ಬೆಳಗಾವಿ | 137.25 | 138.78 | 539 |
| 34 | ಹುಬ್ಬಳ್ಳಿ-ಧಾರವಾಡ | 230.89 | 220.64 | 548 |
| 35 | ಬಳ್ಳಾರಿ | 40.95 | 47.83 | 193 |
| 36 | ವಿಜಯಪುರ | 102.59 | 62.96 | 199 |
| 37 | ಶಿವಮೊಗ್ಗ | 82.65 | 83.46 | 31 |
| 38 | ತುಮಕೂರು | 187.60 | 181.19 | 423 |
| 39 | ಮೈಸೂರು | 668.21 | 497.20 | 441 |
| 40 | ಮಂಗಳೂರು | 751.98 | 395.41 | 1272 |
| 41 | ದಾವಣಗೆರೆ | 82.23 | 92.20 | 184 |
| ಒಟ್ಟು | | **5077.83** | **4796.40** | **13692** |